ಪಟ್ಟಣ ಕುತೂಹಲ

ಎಂ.ಎಸ್. ಶ್ರೀರಾಮ್



# ನಗರ ನಗರಕಾರಣ ನಗರೀಕರಣ

ನಾವು ಇಂದು ಯಾವುದೆಲ್ಲ ಸಮಸ್ಯೆಗಳನ್ನು ಎದುರಿಸುತ್ತಿದ್ದೇವೋ, ಅವೇ ಸಮಸ್ಯೆಗಳು ಅನೇಕ ಶತಮಾನಗಳಿಂದ ಇವೆ. ಮನುಕುಲದ ವಿಕಾಸ ಮತ್ತು ವಿಲಾಸದೊಂದಿಗೆ ನಗರೀಕರಣ ಬೆಸೆದು ನಿಂತಿದೆ.

ನಮ್ಮ ಎಚ್ಚರದ ಸಮಯದಲ್ಲಿ, ನಾವು ಮೌನವಾಗಿ ಒಂಟಿಯಾಗಿ ಯಾವ ಮಾತೂ ಇಲ್ಲದೇ ಎಷ್ಟು ಕಾಲ ಕಳೆಯಬಹುದು? ಒಂಟಿತನ ನಮ್ಮನ್ನು ಕಾಡುತ್ತಿದೆಯೇ? ಆಹಾರ, ಮೈಥುನಕ್ಕೂ ಮಿಗಿಲಾಗಿ ಮಾನವ ತನ್ನ ಕೆಲಸದ, ವಿರಾಮದ ಕಾಲವನ್ನು ಮಿಕ್ಕ ಮಾನವರೊಂದಿಗೆ ಕಳೆಯುವುದು ಸಹಜವೆನ್ನುವುದರಲ್ಲಿಯೇ ನಗರಗಳ ಹುಟ್ಟಿನ ಗುಟ್ಟಿರಬಹುದು. ಜನರ ಸಾಮಾಜಿಕ ವ್ಯವಹಾರಗಳಿಗೆ, ವಸ್ತುಗಳ ವಿನಿಮಯಕ್ಕೆ, ಮನರಂಜನೆಗೆ – ಎಲ್ಲಕ್ಕೂ ಮಿಕ್ಕ ಮಾನವರ ಸಾಂಗತ್ಯ ಬೇಕು. ಅದಕ್ಕೇ ಜನ ಒಂದೆಡೆ ಒಟ್ಟುಗೂಡುವ ಅವಶ್ಯಕತೆಯಿರುತ್ತದೆ. ನಮ್ಮಲ್ಲಿ ತಂತ್ರಜ್ಞಾನದ ವಿಕಾಸ, ಸೇವೆಗಳ ವಿಸ್ತಾರವಾಗುತ್ತಿರುವಂತೆ ನಗರೀಕರಣದ ಅವಶ್ಯಕತೆಯೂ ಬೆಳೆಯುತ್ತಿದೆ. ಅನಾದಿ ಕಾಲದಿಂದಲೂ ನಾವು ನಗರಗಳ ಬಗ್ಗೆ ಅಧ್ಯಯನ ಮಾಡುತ್ತಾ ಬಂದಿದ್ದೇವೆ. ನಗರಗಳಿಗೆ ಸುಮಾರು 6,000 ವರ್ಷಗಳ ಇತಿಹಾಸವಿದೆಯೆಂದು ಮೊನಿಕಾ ಸ್ಮಿತ್ ತಮ್ಮ ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ. ಮಾನವ ಒಂದು ಸಾಮಾಜಿಕ ಪ್ರಾಣಿಯಾದ್ದರಿಂದ ಜನ ಒಂದೆಡೆ ಸೇರಿ ಜಾತ್ರೆಯಾಗುವುದು ಯಾವುದೇ ಆಶ್ಚರ್ಯದ ಮಾತಲ್ಲ. ಮೊದಲಿಗೆ ಉತ್ಪಾದನೆ (ಕೃಷಿ) ವಿಕೇಂದ್ರೀಕೃತವಾಗಿ ಆಗುತ್ತಿತ್ತು. ಔದ್ಯೋಗಿಕ ಕ್ರಾಂತಿ ಮತ್ತು ಆಧುನಿಕ ಫ್ಯಾಕ್ಟರಿಗಳ ಆವಿಷ್ಕಾರವಾಗುತ್ತಿದ್ದಂತೆ ನಾವು ಕೇಂದ್ರೀಕರಣದತ್ತ – ದೊಡ್ಡ ಫ್ಯಾಕ್ಟರಿಗಳಲ್ಲಿ ಅನೇಕ ಜನರು ಸೇರಿ ಯಂತ್ರಗಳನ್ನು ಚಲಾಯಿಸುವತ್ತ ಸಾಗಿದೆವು. ಗ್ರಾಮಗಳಿಂದ ಟೌನ್‌ಷಿಪ್ ಮತ್ತು ಅಲ್ಲಿಂದ ನಗರದತ್ತ ನಾವು ಸಾಗಿದೆವು. ಹೀಗೆ ನಗರೀಕರಣ ಕಳೆದೆರಡು ಶತಮಾನಗಳಲ್ಲಿ ತೀವ್ರಗತಿಯನ್ನು ಪಡೆದುಕೊಂಡಿರಬಹುದು.

ಇಂದಿನ ದಿನದಲ್ಲಿ ಪ್ರಪಂಚದ ಶೇ. 50ಕ್ಕೂ ಹೆಚ್ಚಿನ ಜನಸಂಖ್ಯೆ ನಗರಗಳಲ್ಲಿ ವಾಸವಾಗಿದೆ. ಸಣ್ಣ ಪಟ್ಟಣಗಳಾಗಿದ್ದ ಊರುಗಳು ಬೆಳೆದು ನಗರಗಳಾಗಿವೆ. ಹೊಸ ನಗರಗಳನ್ನು ಕಟ್ಟಿದ್ದೇವೆ. ಗ್ರಾಮಾಂತರ ಪ್ರದೇಶದಲ್ಲೂ ನಗರಗಳಲ್ಲಿ ಸಿಗಬಹುದಾದ ಸವಲತ್ತುಗಳನ್ನು ನೀಡಬೇಕೆಂದು ರಾಷ್ಟ್ರಪತಿಗಳಾಗಿದ್ದ ದಿವಂಗತ ಅಬ್ದುಲ್ ಕಲಾಂ ಅವರು ಹೇಳಿದ್ದರು. ಅದಕ್ಕೊಂದು 'ಪುರ' (ಪ್ರೊವೈಡಿಂಗ್ ಅರ್ಬನ್ ಅಮೆನಿಟೀಸ್ ಇನ್ ರೂರಲ್ ಏರಿಯಾಸ್ – PURA) ಎನ್ನುವ ಮಾರ್ಗಸೂಚಿಯನ್ನೂ ಕಲಾಂ ತಯಾರಿಸಿಕೊಟ್ಟಿದ್ದರು.

ನಗರವೆಂದರೆ ಹೆಚ್ಚಿನ ಜನಸಾಂದ್ರತೆ. ಹೆಚ್ಚಿನ ಜನರಿದ್ದರೆ, ಹೆಚ್ಚಿನ